ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಶುಕ್ರವಾರ, ದಿನಾಂಕ: 11ನೇ ಡಿಸೆಂಬರ್, 2020

ಕರೋನ ಸಮಯದಲ್ಲಿ ಖಾಸಗಿ ಬಸ್/ಟ್ಯಾಕ್ಸಿಗಳಿಗೆ ರಸ್ತೆ ತೆರಿಗೆಯಲ್ಲಿ ವಿನಾಯಿತಿ ನೀಡುವ ಬಗ್ಗೆ

ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) -

64(397) ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಕರೋನದಿಂದಾಗಿ ಖಾಸಗಿ ಬಸ್ ಮಾಲೀಕರು ತಮ್ಮ ಬಸ್‌ಗಳನ್ನು ಸರ್ಕಾರಕ್ಕೆ ಒಪ್ಪಿಸಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು ಹಾಗೂ ಕೊಡಗು ಜಿಲ್ಲೆಯಲ್ಲಿನ ಬಸ್‌ಗಳ ವಿವರಗಳನ್ನು ನೀಡುವುದು)

(ಆ) ಈ ಖಾಸಗಿ ಬಸ್ ಮಾಲೀಕರುಗಳಿಗೆ ಸರ್ಕಾರವು ನೀಡಿರುವ ಸಹಾಯ ಏನು: (ವಿವರಗಳನ್ನು ನೀಡುವುದು)

(ಇ) ಈ ಖಾಸಗಿ ಬಸ್/ಟ್ಯಾಕ್ಸಿಗಳಿಗೆ ಕರೋನಾ ಸಂಕಷ್ಟವು ನಿಲ್ಲುವವರೆಗೆ ರಸ್ತೆ ತೆರಿಗೆಯಲ್ಲಿ 50% ಕಡಿತಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು? (ವಿವರ ನೀಡುವುದು)